ಉ) ಮಾರ್ಪಡಿತ ಯೋಜನಾ ವರದಿಯನ್ನು ಕಾವೇರಿ ನೀರಾವರಿ ನಿಗಮದ ಅಂದಾಜು ಪರಿಶೀಲನಾ ಸಮಿತಿ ಸಭೆಯಲ್ಲಿ ಮರು ಪರೀಶಿಲನೆ ನಂತರ ನಿಗಮದ ಮಂಡಳಿಯ ಶಿಫಾರಸ್ಸನ್ನು ಅನುಸರಿಸಿ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಸಕ್ಕರೆ ಕಾರ್ಖಾನೆಯಿಂದ ಪರಿಸರ ಮಾಲಿನ್ಯ

2037(2466); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ),

1) ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕಿನ ಮಾಕವಳ್ಳಿ ಗ್ರಾಮದಲ್ಲಿ ಕೋರಮಂಡಲ್ ಸಕ್ಕರೆ ಕಾರ್ಖಾನೆ ಆರಂಭಿಸಿರುವ ಕೋ–ಜೆನ್ ವಿದ್ಯುತ್ ಉತ್ಪಾದನಾ ಘಟಕ ಮತ್ತು ಮಧ್ಯಸಾರ ಘಟಕದ ತ್ಯಾಜ್ಯ ಮತ್ತು ಕಲುಷಿತ ನೀರು ಹೇಮಾವತಿ ನದಿಯನ್ನು ಸೇರಿ, ನದಿ ನೀರನ್ನು ಕಲುಷಿತಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ರೈತ ಸಂಘದವರು ಮತ್ತು ಬಾಧಿತ ಗ್ರಾಮಗಳ ಜನತೆ ಪತ್ರಿಭಟನೆ ನಡೆಸಿ ಮನವಿ ಸಲ್ಲಿಸಿರುವುದು ಹಾಗೂ ಚೆನ್ನೈನ ಹಸಿರು ಪೀಠದ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

3) ಬಂದಿದ್ದಲ್ಲಿ, ಪರಿಸರ ಮಂಡಳಿ ಹಾಗೂ ಸರ್ಕಾರ ಕೈಗೊಂಡಿರುವ ಕ್ರಮವೇನು; ಚೆನ್ನೈ ಹಸಿರು ಪೀಠದ ನ್ಯಾಯಾಲಯದ ಮುಂದಿರುವ ಅರ್ಜಿಯನ್ನು ರಾಜ್ಯದ ಉಚ್ಚ ನ್ಯಾಯಾಲಯಕ್ಕೆ ವರ್ಗಾಯಿಸುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಬಿ. ರಮಾನಾಥರೈ (ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

1) ಇಲ್ಲ.

2) ಹೌದು.

3) ಸದರಿ ಘಟಕದವರು ಕೋಜೆನ್ ವಿದ್ಯುತ್ ಸಾಮರ್ಥ್ಯವನ್ನು 12 ಮೆ.ವ್ಯಾ. ನಿಂದ 30 ಮೆ.ವ್ಯಾ.ಗೆ ಮತ್ತು ಹೊಸದಾಗಿ ಮಧ್ಯಸಾರ ತಯಾರಿಸುವ ಘಟಕವನ್ನು ಸ್ಥಾಪಿಸಲು ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯ, ನವದೆಹಲಿಯಿಂದ ಪರಿಸರ ವಿಮೋಚನಾ ಪತ್ರವನ್ನು ದಿನಾಂಕ: 31.12.2012ರಂದು ಪಡೆದಿರುತ್ತಾರೆ. ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕೋಜೆನ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು 12 ಮೆ.ವ್ಯಾ ನಿಂದ 30 ಮೆ.ವ್ಯಾ.ಗೆ ಹೆಚ್ಚಿಸಲು ಮಾತ್ರ ಸ್ಥಾಪನಾ ಸಮ್ಮತಿ ಪತ್ರವನ್ನು ದಿನಾಂಕ: 24.04.2013ರಂದು ನೀಡಲಾಗಿದೆ. ಆದರೆ ಮಧ್ಯಸಾರ ಘಟಕವನ್ನು ಉದ್ದಿಮೆದಾರರು ಸ್ಥಾಪಿಸುತ್ತಿಲ್ಲವಾದ್ದರಿಂದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಮ್ಮತಿ ಪತ್ರವನ್ನು ಪಡೆದಿರುವುದಿಲ್ಲ.

12 ಮೆ.ವ್ಯಾ. ನಿಂದ 30 ಮೆ.ವ್ಯಾ.ಗೆ ಹೆಚ್ಚಿಸಲು ನೀಡಲಾಗಿರುವ ಸ್ಥಾಪನಾ ಸಮ್ಮತಿ ಪತ್ರದಂತೆ ಕೋಜೆನ್ ವಿದ್ಯುತ್ ವಿಸ್ತರಣಾ ಘಟಕದ ಕೆಲಸವು ಪ್ರಗತಿಯಲ್ಲಿದ್ದು, ಈ ಯೋಜನೆಯನ್ನು ನಿಲ್ಲಿಸುವಂತೆ ರೈತ ಸಂಘ ಹಾಗೂ ಇತರರು ಪ್ರತಿಭಟನೆ ನಡೆಸುತ್ತಿರುತ್ತಾರೆ. ಹಾಗೂ ಹಸಿರು ಪೀಠದ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. Environmental Impact Assessment ಅಧಿಸೂಚನೆ 2006 ಅನ್ವಯ ಉದ್ದೇಶಿತ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ ಬಗ್ಗೆ ಮತ್ತು ಮಧ್ಯಸಾರ ಘಟಕ ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯವು ಪರಿಸರ ವಿವಮೋಚನಾ ಪತ್ರದಲ್ಲಿ ಮಾಲಿನ್ಯ ನಿಯಂತ್ರಣದ ಬಗ್ಗೆ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಪರಿಸರ ವಿಮೋಚನಾ ಪತ್ರವನ್ನು ನೀಡಿರುತ್ತಾರೆ ಹಾಗೂ ಸದರಿ ಘಟಕದವರಿಗೆ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು

12MW ನಿಂದ 30 MW ಗೆ ಹೆಚ್ಚಿಸಿರುವುದರ ಬಗ್ಗೆ ಸ್ಥಾಪನ ಸಮ್ಮತಿ ಪತ್ರವನ್ನು ನೀಡಿದ್ದು, ಉತ್ಪಾದನ ಸಮಯದಲ್ಲಿ ಹೊರ ಹೊಮ್ಮುವ ಹೊಗೆ ಮತ್ತು ಧೂಳಿನ ಕಣಗಳನ್ನು ನಿಯಂತ್ರಿಸುವ ಸಲುವಾಗಿ 90 ಮೀಟರ್ ಎತ್ತರದ ಚಿಮಣಿ ಹಾಗೂ ಎಲೆಕ್ಟ್ರೋ ಸ್ಟಾಟಿಕ್ ಪ್ರಿಸಿಪಿಟೇಟರ್ ಎಂಬ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಅಳವಡಿಸುವಂತೆ ಹಾಗೂ ಧೂಳಿನ ಕಣದ ಸಾಂದ್ರತೆಯನ್ನು 50mg/NM^3 ಕ್ಕಿಂತ ಹೆಚ್ಚಾಗದಂತೆ ನಿಯಂತ್ರಿಸುವ ಷರತ್ತನ್ನು ವಿಧಿಸಲಾಗಿದೆ. ಇದರ ಜೊತೆಗೆ ಸಕ್ಕರೆ ಮತ್ತು ವಿದ್ಯುತ್ ತಯಾರಿಕ ವಿಧಾನದಿಂದ ಉತ್ಪತ್ತಿಯಾದಂತಹ ತ್ಯಾಜ್ಯ ನೀರನ್ನು ಸಂಸ್ಕರಣ ಘಟಕಗಳಲ್ಲಿ ಸಂಸ್ಕರಿಸಿ ನಂತರ ಸಂಸ್ಕರಿಸಿದ ತ್ಯಾಜ್ಯ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಬೇಕೆಂಬ ಷರತ್ತಿನೊಂದಿಗೆ ಸಮ್ಮತಿ ಪತ್ರ ನೀಡಲಾಗಿರುತ್ತದೆ.

ಈಗಿರುವ ಜಲ ಮತ್ತು ವಾಯು ಮಾಲಿನ್ಯ ಮೂಲಗಳಿಗೆ ಉದ್ದಿಮೆಯು ಮಂಡಳಿಯು ನಿಗಧಿಪಡಿಸಿರುವ ಮಾಲಿನ್ಯ ನಿಯಂತ್ರಣ ವ್ಯವಸ್ಥೆಗಳನ್ನು ಅಳವಡಿಸಿರುತ್ತಾರೆ.

ಸರ್ವೋಚ್ಚ ನ್ಯಾಯಾಲಯವು ಪರಿಸರಕ್ಕೆ ಸಂಬಂಧಿಸಿದಂತಹ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಪ್ರತ್ಯೇಕವಾದ ಹಸಿರು ಪೀಠದ ನ್ಯಾಯಾಲಯಗಳನ್ನು ಸ್ಥಾಪಿಸಿರುತ್ತದೆ. ಸದರಿ ಪ್ರಕರಣವು ಪರಿಸರಕ್ಕೆ ಸಂಬಂಧಿಸಿರುವುದರಿಂದ ಈ ಪ್ರಕರಣವು ಚೆನ್ನೈನಲ್ಲಿರುವ ಹಸಿರು ಪೀಠದಲ್ಲಿಯೇ ಇತ್ಯರ್ಥವಾಗಬೇಕಾಗಿರುವುದರಿಂದ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ವರ್ಗಾಯಿಸಲು ಬರುವುದಿಲ್ಲ.